**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ, ಇವರ ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ (124)ಕ್ಕೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ**

**ಪ್ರಶ್ನೆ:**

ಬೆಂಗಳೂರಿನ ಜೀವನ್‌ಭೀಮಾನಗರದಲ್ಲಿ ಲೋಕೋಪಯೋಗಿ ಇಲಾಖೆಯಡಿ ಎ ಮಾದರಿಯ 420ಕ್ಕೂ ಹೆಚ್ಚು ಹಾಗೂ ಡಿ ಮಾದರಿಯ 50ಕ್ಕೂ ಹೆಚ್ಚು ವಸತಿ ಗೃಹಗಳಿದ್ದು, ವಿಧಾನಸೌಧ, ವಿಕಾಸಸೌಧ ಮತ್ತು ಹೈಕೋರ್ಟ್‌ನಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ನೌಕರರುಗಳಿಗೆ ಹಂಚಿಕೆಯಾಗಿರುತ್ತವೆ. ಬೆಳಗ್ಗೆ 09:30 ರಿಂದ 10:30 ರವರೆಗೆ ಜೀವನ್‌ಭೀಮಾನಗರದಿಂದ ಬಸ್‌ಗಳು ಸಿಗದೇ ಕಚೇರಿಯ ಸಮಯಕ್ಕೆ ಸರಿಯಾಗಿ ಹಾಜರಾಗುವುದು ಕಷ್ಟಕರವಾಗಿರುತ್ತದೆ ಹಾಗೂ ಸಂಜೆ 06:00 ಗಂಟೆಯಿಂದ ಜೀವನ್‌ಭೀಮಾನಗರಕ್ಕೆ ಬಸ್‌ಗಳ ಸಂಖ್ಯೆ ವಿರಳವಾಗಿರುತ್ತದೆ. ಮೆಟ್ರೋ ಸೌಲಭ್ಯವಿದ್ದರೂ ಸಹ ಇಂದಿರಾನಗರ ಸ್ಟೇಷನ್‌ನಿಂದ ಬಸ್ಸಿನಲ್ಲಿಯೇ ಪ್ರಯಾಣಿಸಬೇಕಾಗಿರುವುದರಿಂದ ತುಂಬಾ ಅನಾನುಕೂಲವಾಗಿರುತ್ತದೆ.

ಬೆಂಗಳೂರಿನ ಎಸ್.ವಿ.ಮೆಟ್ರೋ ಸ್ಟೇಷನ್‌ನಿಂದ ರಮೇಶ್‌ನಗರ ಮತ್ತು ಬಸವನಗರಕ್ಕೆ ತಿಪ್ಪಸಂದ್ರ ಮಾರ್ಗವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮೆಟ್ರೋ ಫೀಡರ್ ಬಸ್‌ಗಳು ಸಂಚರಿಸುತ್ತಿದ್ದು, ಅವುಗಳು ಕೆಎಫ್‌ಸಿ, ಸಿಎಂಹೆಚ್, ತಿಪ್ಪಸಂದ್ರ ಮುಖ್ಯರಸ್ತೆ, ತಿಪ್ಪಸಂದ್ರ ಮಾರ್ಕೆಟ್, ಬಿಇಎಂಎಲ್ ಗೇಟ್ ಮಾರ್ಗವಾಗಿ ಸಂಚರಿಸುತ್ತಿವೆ. ಸದರಿ ಮಾರ್ಗದಲ್ಲಿಯೇ ಶಿವಾಜಿನಗರದಿಂದ ಕೆ.ಆರ್.ಮಾರ್ಕೆಟ್‌ನಿಂದ ಹಾಗೂ ಮೆಜೆಸ್ಟಿಕ್‌ನಿಂದ ಬಿ.ಎಂ.ಟಿ.ಸಿ ಬಸ್ಸುಗಳು (ಬಸ್ ಸಂಖ್ಯೆ:314, 314ಎ, 314ಬಿ, 314ಡಿ, 314ಪಿ) ಯತೇಚ್ಛವಾಗಿ ಸಂಚರಿಸುತ್ತಿರುವುದರಿಂದ ಎಸ್.ವಿ.ಮೆಟ್ರೋ ಸ್ಟೇಷನ್‌ನಿಂದ ಹೊರಡುವ ಫೀಡರ್ ಬಸ್‌ಗಳು ಜೀವನ್‌ಭೀಮಾನಗರ ಮಾರ್ಗವಾಗಿ ರಮೇಶ್‌ನಗರ ಮತ್ತು ಬಸವನಗರಕ್ಕೆ ಸಂಚರಿಸುವಂತೆ ಕ್ರಮಕ್ಕೈಗೊಳ್ಳುವ ಕುರಿತು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಉತ್ತರ :**

ಬೆಂಗಳೂರು ಮಹಾನಗರ ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25.0 ಕಿ.ಮೀ.ವರೆಗೆ ಕಾರ್ಯಾಚರಣೆ ವ್ಯಾಪ್ತಿಯನ್ನು ಹೊಂದಿದ್ದು, ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 5867 ಅನುಸೂಚಿಗಳನ್ನು 61,631 ಸುತ್ತುವಳಿಗಳೊಂದಿಗೆ 12.06 ಲಕ್ಷ ಕಿ.ಮೀ. ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.

ಪ್ರಸ್ತುತ ಜೀವನ್‌ಭೀಮಾನಗರದಿಂದ ಕೋಡಿಹಳ್ಳಿ, ತಿಪ್ಪಸಂದ್ರ ಮುಖ್ಯ ರಸ್ತೆ, ಇಂದಿರಾನಗರ ಕೆಎಫ್‌ಸಿ, ಇಂದಿರಾನಗರ ಮೆಟ್ರೋ ಸ್ಟೇಷನ್ ಮಾರ್ಗವಾಗಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಮಾರ್ಗ ಸಂಖ್ಯೆ:138ರಲ್ಲಿ 4 ಅನುಸೂಚಿಗಳಿಂದ 50 ಸುತ್ತುವಳಿಗಳನ್ನು, ಶಿವಾಜಿನಗರ ಬಸ್ ನಿಲ್ದಾಣಕ್ಕೆ ಮಾರ್ಗ ಸಂಖ್ಯೆ:139ರಲ್ಲಿ 2 ಅನುಸೂಚಿಗಳಿಂದ 34 ಸುತ್ತುವಳಿಗಳನ್ನು ಮತ್ತು ಜೀವನ್‌ಭೀಮಾನಗರದಿಂದ ಕೋಡಿಹಳ್ಳಿ, ತಿಪ್ಪಸಂದ್ರ ಮುಖ್ಯ ರಸ್ತೆ, ಇಂದಿರಾನಗರ ಕೆಎಫ್‌ಸಿ, ಕೋರಮಂಗಲ ಮಾರ್ಗವಾಗಿ ಸೆಂಟ್ರಲ್ ಸಿಲ್ಕ್ ಬೋರ್ಡ್‌ಗೆ ಮಾರ್ಗ ಸಂಖ್ಯೆ: 201ಕ್ಯೂ ರಲ್ಲಿ 2 ಅನುಸೂಚಿಗಳಿಂದ 12 ಸುತ್ತುವಳಿಗಳನ್ನು ಹಾಗೂ ಬನಶಂಕರಿಗೆ ಮಾರ್ಗ ಸಂಖ್ಯೆ: 201-ಜಿ ರಲ್ಲಿ 9 ಅನುಸೂಚಿಗಳಿಂದ 84 ಸುತ್ತುವಳಿಗಳನ್ನು ಒಟ್ಟು 180 ಸುತ್ತುವಳಿಗಳನ್ನು ಆಚರಣೆಗೊಳಿಸಲಾಗುತ್ತಿದೆ.

ಅಲ್ಲದೇ ನಗರದ ವಿವಿಧ ಭಾಗಗಳಿಂದ ಇಂದಿರಾನಗರ ಕೆಎಫ್‌ಸಿ, ಬಿಇಎಂಎಲ್ ಗೇಟ್ ಮಲ್ಲೇಶಪಾಳ್ಯ ಮಾರ್ಗವಾಗಿ ಬಸವನಗರ/ರಮೇಶ್ ನಗರಕ್ಕೆ ಆಚರಣೆಗೊಳಿಸುವ (ಮಾರ್ಗ ಸಂಖ್ಯೆ ಎಂಎಫ್-1ಎಫ್ ಮಾರ್ಗಗಳು ಸೇರಿದಂತೆ) ಎಲ್ಲಾ ಮಾರ್ಗಗಳನ್ನು ತಿಪ್ಪಸಂದ್ರ ಮಾರ್ಕೆಟ್ ಮಾರ್ಗವಾಗಿ ಹಾಗೂ ಬಸವನಗರ/ರಮೇಶ್ ನಗರಕ್ಕೆ ಹಾಗೂ ರಮೇಶ್‌ನಗರ/ಬಸವನಗರದಿಂದ ನಗರದ ಕಡೆಗೆ ಆಚರಣೆಗೊಳಿಸುವಾಗ ಮಲ್ಲೇಶಪಾಳ್ಯ, ಬಿಇಎಂಎಲ್ ಗೇಟ್, ಜೀವನ್‌ಭೀಮಾನಗರ ಕ್ರಾಸ್, ಇಂದಿರಾನಗರ ಕೆಎಫ್‌ಸಿ ಮಾರ್ಗವಾಗಿ ಆಚರಣೆಗೊಳಿಸಲಾಗುತ್ತಿದೆ.

ಎಸ್.ವಿ.ಮೆಟ್ರೋ ನಿಲ್ದಾಣದಿಂದ ರಮೇಶ್‌ನಗರಕ್ಕೆ ಆಚರಣೆಯಲ್ಲಿರುವ ಮಾರ್ಗ ಸಂಖ್ಯೆ:ಎಎಫ್-1ಎಫ್ ಮೆಟ್ರೋ ಫೀಡರ್ ಸಾರಿಗೆಗಳನ್ನು ಕೋರಿಕೆಯಂತೆ ಜೀವನ್‌ಭೀಮಾನಗರ ಮಾರ್ಗವಾಗಿ ಆಚರಣೆಗೊಳಿಸುವ ಬಗ್ಗೆ ಪರಿಶೀಲಿಸಿ, ಆದ್ಯತೆಯ ಮೇರೆಗೆ ಕ್ರಮ ವಹಿಸಲಾಗುವುದು.

ಸಂಖ್ಯೆ: ಟಿಡಿ 96 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು